# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲುಃ 5 / ಪಿಡಬ್ಲುಃ 3

ದಿನಾಂಕಃ 19.08.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶೇಖಪ್ಪ ಪವಾರ |
| ತಂದೆಯ ಹೆಸರು | : | ಪೀರಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಅತ್ತಿಕಟ್ಟಿ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

**1. ಈಗ ತೋರಿಸಿದ ಶವ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.**

2. ಈಗ ಸುಮಾರು 2 ವರ್ಷಗಳ ಹಿಂದೆ ಮುಂಡರಗಿ ಪೋಲೀಸರು ಮುಂಡರಗಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಸೋಮಲೆಪ್ಪ ನಾಯಕ್ ಈತನ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ನನ್ನ ಜೊತೆಗೆ ಚಾಸಾ-4 ರವರು ಸಹ ಹಾಜರಿದ್ದರು. ಚಾಸಾ-17 ರವರು ಹಾಜರಿದ್ದು, ಸದರಿ ಶವವು ಮೃತ ಸೋಮಲೆಪ್ಪ ನಾಯಕ್ ಇವರ ಶವವಿರುತ್ತದೆ ಎಂದು ಹೇಳಿರುತ್ತಾರೆ. ನಾನು ಶವವನ್ನು ಪರಿಶೀಲಿಸಿದಾಗ, ಗದ್ದಕ್ಕೆ, ಹೊಟ್ಟೆಗೆ, ಎಡಗೈ ಹಾಗೂ ಎದೆಯ ಮೇಲೆ ಚಾಕುವಿನಿಂದ ತಿವಿದ ಗಾಯಗಳಾಗಿದ್ದವು. ಕುತ್ತಿಗೆಗೆ ತೀವ್ರ ತರಹವಾದ ಗಾಯವಾಗಿತ್ತು. ಅದರಿಂದ, ರಕ್ತ ಹೊರಗೆ ಬಂದಿತ್ತು. ಆ ರೀತಿಯಾಗಿ ಆರೋಪಿಯು ಚಾಕುವಿನಿಂದ ತಿವಿದು ಗಾಯಮಾಡಿರುತ್ತಾನೆ ಎಂದು ನನಗೆ ಗೊತ್ತಾಯಿತು. ಆಗ ಫೋಟೋಗಳನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋಗಳಲ್ಲಿ ನನ್ನ ಭಾವಚಿತ್ರ ಇರುತ್ತದೆ. **ಸದರಿ ಫೋಟೋಗಳನ್ನು ನಿಪಿ-7 ಮತ್ತು 8 ಎಂದು** ಗುರುತಿಸಲಾಯಿತು. ನಿಪಿ-8 ರಲ್ಲಿ ನನ್ನ ಭಾವಚಿತ್ರವಿರುತ್ತದೆ.

3. ಶವ ಪಂಚನಾಮೆಯನ್ನು ಮಧ್ಯಾಹ್ನ 01.00 ಯಿಂದ 02.00 ಗಂಟೆಯವರೆಗೆ ಮಾಡಲಾಯಿತು. ಶವದ ಮೇಲೆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು ಮಾ 2 ರಿಂದ 4 ಎಂದು ಗುರುತಿಸಲಾಗಿರುತ್ತದೆ.

**ಪಾಟಿ ಸವಾಲುಃ ಶ್ರೀ ಎಂ.ಹೆಚ್. ಭಜಂತ್ರಿ, ಆರೋಪಿ ಪರ ವಕೀಲರಿಂದಃ**

(ಶ್ರೀ ಯು ಹೆಚ್ ಬಿ ವಕೀಲರು ಶ್ರೀ ಎಂ.ಹೆಚ್. ಭಜಂತ್ರಿ, ವಕೀಲರು ಊರಿಗೆ ಹೋಗಿರುತ್ತಾರೆ ಎಂದು ಪಾಟಿ ಸವಾಲಿಗೆ ಸಮಯ ಕೋರಿದ್ದು, ರೂ.250/- ಖರ್ಚಿನ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 6 / ಪಿಡಬ್ಲು: 4

ದಿನಾಂಕ: 19.08.2024

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಅಲ್ಲಾಭಕ್ಷಿ ಸೊಟಕನಾಳ |
| ತಂದೆಯ ಹೆಸರು | : | ಬಾಬಾಜಾನ್ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಟೇಲರಿಂಗ್ |
| ವಾಸ ಸ್ಥಳ | : | ಹಾರೋಗೇರಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಈಗ ತೋರಿಸಿದ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಆರೋಪಿತನ ಸಂರಕ್ಷಣೆಗಾಗಿ ಇಟ್ಟುಕೊಂಡಿದ್ದ ಮಚ್ಚು ಜಪ್ತಿ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-9 ಎಂದು ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-9(ಎ) ಎಂದು ಗುರುತಿಸಲಾಯಿತು.

2. ಈಗ ತೋರಿಸಿದ ಆರೋಪಿಯ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

3. ಈಗ ತೋರಿಸಿದ ಮೃತನ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

4. ಈಗ ಸುಮಾರು 2 ವರ್ಷಗಳ ಹಿಂದೆ ನಾನು ಮುಂಡರಗಿ ಪೊಲೀಸ್ ಠಾಣೆಗೆ ಹೋದಾಗ ನನ್ನನ್ನು ಪಂಚನಾಮೆಗೆ ಎಂದು ಕರೆಸಿರುತ್ತಾರೆ. ಹಾಗೆಯೇ, ಚಾಸಾ-7 ರವರನ್ನು ಪಂಚನಾಮೆಗೆ ಎಂದು ಕರೆಸಿರುತ್ತಾರೆ. ಅಲ್ಲಿ ನ್ಯಾಯಾಲಯದ ವಿಸಿಯಲ್ಲಿ ಕಾಣಿಸುವ ಆರೋಪಿಯು ಇದ್ದರು. ನಮ್ಮ ಸಮಕ್ಷಮ ಆರೋಪಿಯ ಹೆಸರನ್ನು ಪೊಲೀಸರು ಕೇಳಿದಾಗ, ಆತನು ತನ್ನ ಹೆಸರನ್ನು ವಿಷ್ಣು ಪವಾರ ಎಂದು ತನ್ನ

ಮತ್ತು ತನ್ನ ಹೆಂಡತಿಯ ಜಗಳವಿದ್ದು, ತಾನು ಅತ್ತಿಕಟ್ಟಿ ತಾಂಡಾದ ನಾಯಕನಿಗೆ ಚಾಕುವಿನಿಂದ ಚುಚ್ಚಿ ಸಾಯಿಸಿರುವುದಾಗಿ ಮತ್ತು ಸದರಿ ಚಾಕುವನ್ನು ಮತ್ತು ಇನ್ನೊಂದು ಮಚ್ಚನ್ನು ಒಂದು ಕಡೆಗೆ ಮುಚ್ಚಿಟ್ಟಿರುವುದಾಗಿ ತನ್ನ ಜೊತೆಗೆ ಬಂದರೆ ತೋರಿಸುವುದಾಗಿ ಹೇಳಿರುತ್ತಾರೆ. ಆಗ ಆರೋಪಿಯು ರಕ್ತದ ಕಲೆ ಇರುವ ಫುಲ್ ತೋಳಿನ ಶರ್ಟನ್ನು ಮೃತನಿಗೆ ಚಾಕುವಿನಿಂದ ಚುಚ್ಚುವಾಗ ಧರಿಸಿದ್ದ ಶರ್ಟು ಎಂದು ಹೇಳಿರುತ್ತಾನೆ.

5. ಆನಂತರ, ಸಂಜೆ 04.15 ಕ್ಕೆ ನಾನು, ಸಿಪಿಐ, ಪೊಲೀಸ್ ಸಿಬ್ಬಂದಿ, ಆರೋಪಿ ಹಾಗೂ ಚಾಸಾ-7 ರವರು ಸೇರಿ ಬರದೂರು ಸಮೀಪವಿರುವ ಒಂದು ಚಿಕ್ಕುತೋಟದ ಎದುರಿಗೆ ರಸ್ತೆಯ ಬದಿಯಲ್ಲಿ ಮುಳ್ಳಿನ ಕಂಟಿಯ ಕೆಳಗೆ ಬಚ್ಚಿಟ್ಟಿದ್ದ ಚಾಕು ಮತ್ತು ಮಚ್ಚನ್ನು ತೆಗೆದು ಹಾಜರುಪಡಿಸಿರುತ್ತಾನೆ. ಸದರಿ ಚಾಕು ಮತ್ತು ಮಚ್ಚನ್ನು ಆರೋಪಿಯು ನನ್ನ ಕೈಗೆ ಕೊಟ್ಟಿರುತ್ತಾನೆ. ನಂತರ, ಪೊಲೀಸರು ಜಪ್ತಿ ಮಾಡಿಕೊಂಡಿರುತ್ತಾರೆ. ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲು ಮಾಡಿದ ಪ್ಯಾಕನ್ನು ಬಿಚ್ಚಿ ಅದರಲ್ಲಿದ್ದ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ್ದು, ಸದರಿ ಚಾಕುವನ್ನು ಮು.ಮಾ.6 ಎಂದು ಗುರುತಿಸಲಾಯಿತು.** ನಂತರ, **ಈಗ ತೆರೆದ ನ್ಯಾಯಾಲಯದಲ್ಲಿ, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲು ಮಾಡಿದ ಪ್ಯಾಕನ್ನು ಬಿಚ್ಚಿ ಅದರಲ್ಲಿದ್ದ ಮಚ್ಚನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ್ದು, ಸದರಿ ಮಚ್ಚನ್ನು ಮು.ಮಾ.7 ಎಂದು ಗುರುತಿಸಲಾಯಿತು. ಮು.ಮಾ 7 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ಮು.ಮಾ-7(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿ ತನ್ನ ಭಾವಚಿತ್ರ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಫೋಟೋವನ್ನು** ನಿಪಿ-**12 ಎಂದು ಗುರುತಿಸಲಾಯಿತು.** ನಿಪಿ-9 ನ್ನು ಸ್ಥಳದಲ್ಲಿಯೇ ಲ್ಯಾಪಟಾಪ್ ಮೂಲಕ ತಯಾರಿಸಲಾಗಿದ್ದು, ನಾನು ಅದಕ್ಕೆ ಸ್ಥಳದಲ್ಲಿಯೇ ಸಹಿಗಳನ್ನು ಮಾಡಿರುತ್ತೇನೆ. ನನ್ನ ಜೊತೆಗೆ ಚಾಸಾ-7 ರವರು ಸಹ ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ. ಆಗ ಆರೋಪಿಯು ಕೂಡ ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ.

**(ಈಗ ಸಮಯ ಮಧ್ಯಾಹ್ನ 02.00 ಗಂಟೆಯಾಗಿರುವುದರಿಂದ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು.)**

ಸಾಕ್ಷಿಯನ್ನು ಮಧ್ಯಾಹ್ನ 02.45 ಗಂಟೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

6. ಆರೋಪಿಯು ಕೊಟ್ಟಂತಹ ಮು.ಮಾ.6 ಮತ್ತು 7ನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ. ನಿಪಿ-9ನ್ನು ಸಂಜೆ 04.30 – 05.30 ಗಂಟೆಯವರೆಗೆ ಮಾಡಲಾಗಿರುತ್ತದೆ. ನಂತರ, ನಾವೆಲ್ಲರೂ ಮುಂಡರಗಿ ಪೊಲೀಸ್ ಠಾಣೆಗೆ ವಾಪಾಸ್ ಬಂದಿರುತ್ತೇವೆ.

7. ಮುಂಡರಗಿ ಪೊಲೀಸ್ ಠಾಣೆಗೆ ವಾಪಾಸ್ ಬಂದ ನಂತರ, ಆರೋಪಿಯ ತಾನು ಕೊಲೆ ಮಾಡುವ ಸಮಯದಲ್ಲಿ ಹಾಕಿಕೊಂಡಿದ್ದ ಆಕಾಶ ನೀಲಿ ಬಣ್ಣದ ರಕ್ತ ಹತ್ತಿದ್ದ ಫುಲ್ ಶರ್ಟನ್ನು ಕಳಚಿ ನನ್ನ ಕೈಗೆ ಕೊಟ್ಟಿರುತ್ತಾನೆ ಮತ್ತು ನಾನು ಅದನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. **ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿಯು ಗುರುತಿಸಿದ್ದು, ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು.** ನಿಪಿ-13 ಫೋಟೋ ಆರೋಪಿಯು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಫುಲ್ ತೋಳಿನ ಶರ್ಟ ಆಗಿರುತ್ತದೆ. ನಿಪಿ-14 ಫೋಟೋ ಆರೋಪಿಯು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಫುಲ್ ತೋಳಿನ ಶರ್ಟನ್ನು ಬಿಚ್ಚಿ ಕೊಡುವ ಸಮಯದಲ್ಲಿ ತೆಗೆದ ಫೋಟೋ ಆಗಿರುತ್ತದೆ. ಆರೋಪಿಯು ಕಳಚಿ ಕೊಟ್ಟ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಪೇಪರನ ಕವರಿನಲ್ಲಿ ಇಟ್ಟು ದಾರವನ್ನು ಸುತ್ತಿ ಸೀಲು ಮಾಡಿದ ಪ್ಯಾಕನ್ನು ಬಿಚ್ಚಿ ಅದರಲ್ಲಿದ್ದ ಒಂದು ತಿಳಿ ಆಕಾಶ ನೀಲಿ ಬಣ್ಣದ ಫುಲ್ ತೋಳಿನ ಶರ್ಟ ವಾಪರಿಸಿದ್ದು, ಅಲ್ಲಲ್ಲಿ ರಕ್ತದ ಕಲೆ ಇದ್ದದ್ದನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ್ದು, ಅದನ್ನು ಮು.ಮಾ.8 ಎಂದು ಗುರುತಿಸಲಾಯಿತು. ಮು.ಮಾ.8ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಮು.ಮಾ-8(ಎ) ಎಂದು ಗುರುತಿಸಲಾಯಿತು.** ಸದರಿ ಚೀಟಿಯ ಮೇಲೆ ಚಾಸಾ-7ರವರು ಸಹ ತಮ್ಮ ಸಹಿಯನ್ನು ಮಾಡಿರುತ್ತಾರೆ. ಆರೋಪಿಯ ಮೈಮೇಲಿನ ಶರ್ಟನ್ನು ಜಪ್ತಿ ಮಾಡುವ ಪಂಚನಾಮೆಯನ್ನು ಸಂಜೆ 06.00 – 07.00 ವರೆಗೆ ಬರೆಯಲಾಗಿರುತ್ತದೆ ಮತ್ತು ಪಂಚನಾಮೆಯನ್ನು ಠಾಣೆಯಲ್ಲಿಯೇ ತಯಾರಿಸಲಾಗಿರುತ್ತದೆ. ನಾನು ಠಾಣೆಯಲ್ಲಿಯೇ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆಗೆ ಚಾಸಾ-7ರವರು ಸಹ ಸಹಿಯನ್ನು ಮಾಡಿರುತ್ತಾರೆ.

8. ನಿಪಿ-10ರ ನಂತರ, ನಾನು ನನ್ನ ಅಂಗಡಿಗೆ ಹೋಗಿದ್ದು, ಪೊಲೀಸರು ನನಗೆ ಪುನಃ ಪೊಲೀಸ್ ಠಾಣೆಗೆ ಬರಬೇಕು ಎಂದು ತಿಳಿಸಿದ್ದರಿಂದ ನಾನು ಪೊಲೀಸ್ ಠಾಣೆಗೆ ಬಂದಿರುತ್ತೇನೆ. ಆಗ

ಚಾಸಾ-7 ರವರು ಕೂಡ ಬಂದಿದ್ದರು. ಆಗ ಪೊಲೀಸ್ ಸಿಬ್ಬಂದಿಯವರು ಮೃತನ ಮೈಮೇಲಿನ ಬಟ್ಟೆಗಳಾದ ಒಂದು ಕತ್ತರಿಸಿ ತೆಗೆದ ಫುಲ್ ತೋಳಿನ ಬನಿಯನ್ ಅಲ್ಲಲ್ಲಿ ರಕ್ತ ಹತ್ತಿದ್ದು, ಒಂದು ಪಟ್ಟಾಪಟ್ಟಿ ಚಡ್ಡಿ ಅದರಲ್ಲಿ ಅಲ್ಲಲ್ಲಿ ರಕ್ತ ಹತ್ತಿದ್ದು ಮತ್ತು ಒಂದು ಬಿಳಿ ಬಣ್ಣದ ಲುಂಗಿ ಅಲ್ಲಲ್ಲಿ ರಕ್ತ ಹತ್ತಿದ್ದು ತಂದು ಚಾಸಾ-29 ಮತ್ತು ನಮ್ಮ ಮುಂದೆ ಹಾಜರುಪಡಿಸಿರುತ್ತಾರೆ. ಅವುಗಳನ್ನು ಒಂದೊಂದು ಕವರಿನಲ್ಲಿ ಪ್ರತ್ಯೇಕವಾಗಿ ಹಾಕಿ ಸೀಲ್ ಮಾಡಲಾಗಿರುತ್ತದೆ. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ-2 ರಿಂದ 4 ಎಂದು ಗುರುತಿಸಲಾಗಿರುತ್ತದೆ. ಮು.ಮಾ-2 ರಿಂದ 4 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿಗಳು ಇರುತ್ತವೆ. ಅವುಗಳನ್ನು ಸಾಕ್ಷಿಯು ಗುರುತಿಸಿದ್ದು, ಅವುಗಳನ್ನು ಮು.ಮಾ-2(ಎ) ಮು.ಮಾ-3(ಎ) ಮತ್ತು ಮು.ಮಾ-4(ಎ) ಎಂದು ಗುರುತಿಸಲಾಯಿತು. ಮು.ಮಾ-2 ರಿಂದ 4 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ಚಾಸಾ-7 ರವರ ಸಹಿಗಳು ಸಹ ಇರುತ್ತವೆ. ನಿಪಿ-11 ನ್ನು ರಾತ್ರಿ 09.30 ರಿಂದ 10.30 ವರೆಗೆ ಮಾಡಲಾಗಿರುತ್ತದೆ. ನಿಪಿ-11 ನ್ನು ಠಾಣೆಯಲ್ಲಿಯೇ ಗಣಕೀಕರಣ ಮಾಡಲಾಗಿದ್ದು, ನಾನು ಮತ್ತು ಚಾಸಾ-7 ರವರು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇವೆ.

**ಪಾಟಿ ಸವಾಲುಃ ಶ್ರೀ ಎಂ.ಹೆಚ್. ಭಜಂತ್ರಿ, ಆರೋಪಿ ಪರ ವಕೀಲರಿಂದಃ**

(ಶ್ರೀ ಯು ಹೆಚ್ ಬಿ ವಕೀಲರು ಶ್ರೀ ಎಂ.ಹೆಚ್. ಭಜಂತ್ರಿ, ವಕೀಲರು ಊರಿಗೆ ಹೋಗಿರುತ್ತಾರೆ ಎಂದು ಪಾಟಿ ಸವಾಲಿಗೆ ಸಮಯ ಕೋರಿದ್ದು, ರೂ.300/- ಖರ್ಚಿನ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**